# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1672

2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸಬೇಕಾದ ದಿನಾಂಕ : 18-03-2026

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ | ಕರಾವಳಿ ಜಿಲ್ಲೆಗಳ ವಿವಿಧ ಮೀನುಗಾರಿಕಾ ಬಂದರುಗಳಲ್ಲಿ ಮತ್ತು ಪ್ರದೇಶಗಳಲ್ಲಿ ಅಳಿವೆಬಾಗಿಲು ಕಳೆದ 30 ವರ್ಷಗಳಲ್ಲಿ ಹೂಳು ತುಂಬುವ ಸಮಸ್ಯೆಯಿಂದಾಗಿ ಎಷ್ಟು ಅಪಘಾತಗಳು ಸಂಭವಿಸಿವೆ; ಎಷ್ಟು ಮೀನುಗಾರರು ಮೃತಪಟ್ಟಿದ್ದಾರೆ; ಎಷ್ಟು ಬೋಟ್‌ಗಳಿಗೆ ಹಾನಿಯಾಗಿದೆ: ಸಂಭವಿಸಿದ ಒಟ್ಟು ನಷ್ಟವೆಷ್ಟು: | ಕರಾವಳಿ ಜಿಲ್ಲೆಗಳ ವಿವಿಧ ಮೀನುಗಾರಿಕಾ ಬಂದರುಗಳಲ್ಲಿ ಮತ್ತು ಅಳಿವೆ ಬಾಗಿಲು ಪ್ರದೇಶಗಳಲ್ಲಿ ಹೂಳು ತುಂಬಿರುವ ಸಮಸ್ಯೆಯಿಂದಾಗಿ ನಡೆದಿರುವ ಅಪಘಾತಗಳು, ಆ ಮೂಲಕ ಸಂಭವಿಸಿರುವ ಮರಣ ಪ್ರಕರಣಗಳು ಮತ್ತು ದೋಣಿ ಹಾನಿ ಪ್ರಕರಣಗಳನ್ನು ಹಾಗೂ ಸಂಭವಿಸಿರುವ ನಷ್ಟಗಳನ್ನು ಪ್ರತ್ಯೇಕವಾಗಿ ದಾಖಲಿಸಿರುವುದಿಲ್ಲ.<br><br>ಆದರೆ, ಕಡಲ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮೀನುಗಾರರು ಮೀನುಗಾರಿಕೆ ಅಥವಾ ಮೀನುಗಾರಿಕೆಗೆ ಸಂಬಂಧಿಸಿದ ಚಟುವಟಿಕೆಯಲ್ಲಿ ತೊಡಗಿರುವಾಗ ಸಂಭವಿಸಿರುವ ದೋಣಿ ಹಾನಿ ಪ್ರಕರಣಗಳು ಮತ್ತು ವೈದ್ಯಕೀಯ ವೆಚ್ಚ, ಮರಣ ಪ್ರಕರಣಗಳಲ್ಲಿ ಸಂಕಷ್ಟಕ್ಕೀಡಾದವರ ಕುಟುಂಬಗಳಿಗೆ ಸಂಕಷ್ಟ ಪರಿಹಾರ ನಿಧಿಯಿಂದ ಆರ್ಥಿಕ ಪರಿಹಾರವನ್ನು ಮೀನುಗಾರಿಕೆ ಇಲಾಖೆಯಿಂದ ನೀಡಲಾಗುತ್ತಿರುತ್ತದೆ. |
| ಆ | ರಾಜ್ಯದ ಅಳಿವೆಬಾಗಿಲು ಹಾಗೂ ಮೀನುಗಾರಿಕಾ ಬಂದರುಗಳಲ್ಲಿ ಹಿಂದಿನ ವರ್ಷಗಳಲ್ಲಿ ಎಷ್ಟು ಬಾರಿ ಡ್ರೆಜಿಂಗ್ (ಹೂಳು ತೆಗೆಯುವ) ಕಾರ್ಯ ಕೈಗೊಳ್ಳಲಾಗಿದೆ; ಈ ಕಾರ್ಯಕ್ಕಾಗಿ ಎಷ್ಟು ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು: ಈ ಪ್ರಕ್ರಿಯೆಯಲ್ಲಿ ಅನುಸರಿಸಿದ ಪ್ರಮಾಣೀಕೃತ ಕಾರ್ಯವಿಧಾನ ಯಾವುದು; (ವರ್ಷವಾರು ವೆಚ್ಚದ ವಿವರ ನೀಡುವುದು); | 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-64 ರಲ್ಲಿ ರಾಜ್ಯದ 8 ಮೀನುಗಾರಿಕೆ ಬಂದರುಗಳಲ್ಲಿ ಮೀನುಗಾರಿಕಾ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇಷನ್ ಚಾನಲ್‌ಗಳಲ್ಲಿ ಹಂತಹಂತವಾಗಿ ಹೂಳೆತ್ತಲಾಗುವುದು ಎಂದು ಘೋಷಿಸಲಾಗಿದೆ. ಅದರಂತೆ, ಈ ಕೆಳಕಂಡ ಬಂದರುಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ರೂ. 2000.00 ಲಕ್ಷ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ, ಸದರಿ ಕಾಮಗಾರಿಗಳಿಗೆ ರೂ.16,83,61,000/- ಅನುದಾನವನ್ನು ಅನುಷ್ಠಾನ ಸಂಸ್ಥೆ ಕರ್ನಾಟಕ ಜಲಸಾರಿಗೆ ಮಂಡಳಿರವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಅದರಂತೆ ಒಟ್ಟು ರೂ.14,82,68,000-00ಗಳು ಖರ್ಚಾಗಿರುತ್ತದೆ. ವಿವರ ಕೆಳಕಂತಿದೆ:-<br><br>(ರೂ.ಲಕ್ಷಗಳಲ್ಲಿ) |

| ಕ್ರ. ಸಂ. | ಮೀನುಗಾರಿಕೆ ಬಂದರು | ವೆಚ್ಚ |
|---|---|---|
| 01 | ಮಂಗಳೂರು | 323.53 |
| 02 | ಮಲ್ಪೆ | 265.93 |
| 03 | ಗಂಗೊಳ್ಳಿ | 372.92 |
| 04 | ಭಟ್ಕಳ | 286.66 |
| 05 | ಕಾರವಾರ | 179.64 |

<table>
<tr><td></td><td></td><td>2023-24ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ (PMMSY) ಯೋಜನೆಯಡಿ ಕೆಳಗಿನ ಬಂದರುಗಳಲ್ಲಿ ಡ್ರೆಡ್ಜಿಂಗ್ ಕೈಗೊಳ್ಳಲು ಅನುಮೋದನೆ ಪಡೆಯಲಾಗಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ. ಪ್ರಸ್ತುತ ಯಾವುದೇ ವೆಚ್ಚ ಮಾಡಿರುವುದಿಲ್ಲ.
<table>
<tr><th>ಕ್ರ. ಸಂ.</th><th>ಮೀನುಗಾರಿಕೆ ಬಂದರು</th><th>ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>01</td><td>ಆಮದಳ್ಳಿ</td><td>561.00</td></tr>
<tr><td>02</td><td>ಬೇಲಿಕೇರಿ-ಹಾರವಾಡ</td><td>414.08</td></tr>
<tr><td>03</td><td>ತದಡಿ</td><td>265.59</td></tr>
</table>
ಒಟ್ಟು ರೂ.1240.67 ಲಕ್ಷಗಳ ಬೇಡಿಕೆ ಸಲ್ಲಿಸಲಾಗಿತ್ತು.<br><br>ಅಳಿವೆ ಬಾಗಿಲು ಹಾಗೂ ಮೀನುಗಾರಿಕಾ ಬಂದರು ಪ್ರದೇಶಗಳಲ್ಲಿ ಹೈಡ್ರೋಗ್ರಾಫಿಕ್ ಸರ್ವೆಯನ್ನು ಕೈಗೊಂಡು ಅದರ ಆಧಾರದ ಮೇಲೆ ಹೂಳು ತೆಗೆಯಬೇಕಾದ ಹೂಳಿನ ಪ್ರಮಾಣವನ್ನು ಲೆಕ್ಕ ಹಾಕಿ ಅಂದಾಜು ಪಟ್ಟಿ ತಯಾರಿಸಿ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗುವುದು.</td></tr>
<tr><td>ಇ</td><td>ಅಳಿವೆಬಾಗಿಲಿನಲ್ಲಿ ಸಂಪೂರ್ಣ ಪ್ರಮಾಣದ ಡ್ರೆಜ್ಜಿಂಗ್ ಮಾಡಲು ಹಾಗೂ ಮರಳು ದಿಬ್ಬ ತೆರವು ಮಾಡಲು ಎಷ್ಟು ಅನುದಾನದ ಅಗತ್ಯವಿದೆ; ರಾಜ್ಯದಲ್ಲಿ ಇಲಾಖೆಯ ಬಳಿ ಸ್ವಂತ ಡ್ರೆಜಿಂಗ್ ಯಂತ್ರವಿಲ್ಲದಿರಲು ಕಾರಣವೇನು; ಕೇರಳ ರಾಜ್ಯದಂತೆ ಸರ್ಕಾರವೇ ಡ್ರೆಜಿಂಗ್ ಯಂತ್ರವನ್ನು ಖರೀದಿಸಿ ನಿರ್ವಹಿಸುವ ಮಾದರಿಯನ್ನು ರಾಜ್ಯದಲ್ಲಿ ಅನುಸರಿಸುವ ಬಗ್ಗೆ ಸರಕಾರದ ನಿರ್ಧಾರಗಳೇನು;</td><td>ಅಳಿವೆ ಬಾಗಿಲು ಹಾಗೂ ಮೀನುಗಾರಿಕಾ ಬಂದರುಗಳಲ್ಲಿ ಡ್ರೆಡ್ಜಿಂಗ್ ಮಾಡಲು ಬೇಕಾಗುವ ಅನುದಾನವನ್ನು ನಿರ್ಧರಿಸಲು ಸದರಿ ಪ್ರದೇಶಗಳಲ್ಲಿ ಹೈಡೋಗ್ರಾಫಿಕ್ ಸರ್ವೆಯನ್ನು ಕೈಗೊಂಡು ಅದರ ಆಧಾರದ ಮೇಲೆ ಹೂಳು ತೆಗೆಯಲು ಇರುವ ಪ್ರಮಾಣವನ್ನು ಕರ್ನಾಟಕ ಜಲಸಾರಿಗೆ ಮಂಡಳಿರವರಿಂದ ಅಂದಾಜಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯಿಂದ ಸ್ವಂತ ಡ್ರೆಡ್ಜಿಂಗ್ ಯಂತ್ರವನ್ನು ಖರೀದಿಸಿ ಅದನ್ನು ಇಲಾಖೆಯ ಅನುದಾನದಿಂದ ನಿರ್ವಹಿಸುವುದು ಕಷ್ಟಸಾಧ್ಯವಾಗಿರುವುದರಿಂದ ಕೇರಳ ರಾಜ್ಯದಂತೆ ಡ್ರೆಡ್ಜಿಂಗ್ ಯಂತ್ರವನ್ನು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.</td></tr>
<tr><td>ಈ</td><td>ಗ್ರಾಬ್ ಡ್ರೆಜ್ಜರ್ ಬದಲು "ಕಟ್ಟಿಂಗ್‌ಡ್ರೆಜ್ಜರ್" ಖರೀದಿಸುವ ಬಗ್ಗೆ ಆಯಾಯ ಮೀನುಗಾರರ ಸಂಘಗಳು ನೀಡಿದ ಮನವಿಗಳ ಕುರಿತು ಇಲಾಖೆಯ ಕ್ರಮಗಳೇನು; ಕೆಲವು ಬಂದರುಗಳಲ್ಲಿ ಡ್ರೆಜಿಂಗ್ ಕಾರ್ಯ ನಿಜವಾಗಿ ನಡೆಯದೆ ಕೇವಲ ಬಿಲ್ ಸಲ್ಲಿಸಿ ಅನುದಾನ ಬಳಸಲಾಗುತ್ತಿದೆ ಎಂಬ ಆರೋಪಗಳಿದ್ದು ಈ ಕುರಿತು ತನಿಖಾ ವರದಿಗಳೇನು;</td><td>“ಗ್ರಾಬ್ ಡ್ರೆಜ್ಜರ್” ಬದಲು "ಕಟ್ಟಿಂಗ್ ಡ್ರೆಜ್ಜರ್" ಖರೀದಿಸುವ ಬಗ್ಗೆ ಮೀನುಗಾರರ ಸಹಕಾರಿ ಸಂಘಗಳಿಂದ ಮೀನುಗಾರಿಕೆ ಇಲಾಖೆಗೆ ಯಾವುದೇ ಮನವಿಗಳು ಸ್ವೀಕೃತವಾಗಿರುವುದಿಲ್ಲ.<br><br>ಮೀನುಗಾರಿಕೆ ಇಲಾಖೆಯಿಂದ ಕೈಗೊಳ್ಳಲಾಗುವ ಎಲ್ಲಾ ಹೂಳೆತ್ತುವ ಕಾಮಗಾರಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖಾಂತರ ಕೈಗೊಳ್ಳಲಾಗುತ್ತಿದೆ.<br><br>ಸದರಿ ಕಾಮಗಾರಿಗಳನ್ನು ಕೈಗೊಳ್ಳಲು “ಗ್ರಾಬ್ ಡ್ರೆಜ್ಜರ್” ಮತ್ತು "ಕಟ್ಟರ್ ಡ್ರೆಜ್ಜರ್" ಯಂತ್ರಗಳನ್ನು ಸ್ಥಳ ನಿರ್ದಿಷ್ಟ ಪ್ರದೇಶಗಳಲ್ಲಿನ ಅವಶ್ಯಕತೆಗೆ ಅನುಗುಣವಾಗಿ ನಿಯೋಜಿಸಿ ಕಾಮಗಾರಿಗಳನ್ನು ಅಭಿಯಂತರರು ಕೈಗೊಳ್ಳುತ್ತಾರೆ<br><br>ಹೂಳೆತ್ತುವ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಕೆಲವು ಬಂದರುಗಳಲ್ಲಿ ಡ್ರೆಡ್ಜಿಂಗ್ ಕಾರ್ಯ ನಿಜವಾಗಿ ನಡೆಯದೆ ಕೇವಲ ಬಿಲ್ ಸಲ್ಲಿಸಿ ಅನುದಾನ ಬಳಸಲಾಗುತ್ತಿದೆ ಎಂಬ ಆರೋಪ / ಅರ್ಜಿಗಳು ಮೀನುಗಾರಿಕೆ ಇಲಾಖೆಗೆ ಸ್ವೀಕೃತವಾಗಿರುವುದಿಲ್ಲ.</td></tr>
</table>

| | | |
|---|---|---|
| ಉ) | ಮೀನುಗಾರರ ಜೀವರಕ್ಷಣೆ ಹಾಗೂ ಬಂದರುಗಳ ಸುಗಮ ಸಂಚಾರಕ್ಕಾಗಿ ನಿಯಮಿತ ನಿರ್ವಹಣಾ ಡ್ರೆಜ್ಜಿಂಗ್‌ನ್ನು ವರ್ಷಕ್ಕೊಮ್ಮೆ ಅಥವಾ ಕನಿಷ್ಠ ಎರಡು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಕೈಗೊಳ್ಳುವ ಬಗ್ಗೆ ಸರ್ಕಾರದ ನಿರ್ಧಾರಗಳೇನು? | 2024 25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-249 ರಲ್ಲಿ "ಮೀನುಗಾರಿಕಾ ದೋಣಿಗಳು ತಂಗುವ ಜೆಟ್ಟಿಗಳು ಹಾಗೂ ಬಂದರುಗಳಲ್ಲಿ ಹೂಳು ತೆಗೆಯುವುದು ಮತ್ತು ಮಲ್ಪೆ, ಹೊನ್ನಾವರ, ಭಟ್ಕಳ, ಕುಂದಾಪುರ ಮತ್ತು ಬೇಲಿಕೇರಿ ಬಂದರುಗಳಲ್ಲಿ, ಎರಡು ವರ್ಷಗಳಿಗೊಮ್ಮೆ ಹೂಳೆತ್ತುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು" ಎಂದು ಘೋಷಿಸಲಾಗಿದೆ<br><br>ಆಯವ್ಯಯ ಭಾಷಣದಲ್ಲಿ ಮಾಡಿರುವ ಘೋಷಣೆಯಂತೆ ಐದು ಬಂದರು ಪ್ರದೇಶಗಳಲ್ಲಿ ಹೂಳೆತ್ತುವ ಬಗ್ಗೆ ಪೂರ್ವ ಬ್ಯಾತಿ ಮೆಟ್ರಿಕ್ ಸರ್ವೆಯನ್ನು ರೂ.69.32 ಲಕ್ಷಗಳ ವೆಚ್ಚದಲ್ಲಿ ನಡೆಸಲಾಗಿದ್ದು, ಅನುದಾನ ಲಭ್ಯತೆಗನುಗುಣವಾಗಿ ಡ್ರೆಜ್ಜಿಂಗ್ ಕಾಮಗಾರಿಗಳನ್ನು ಹಂತಹಂತವಾಗಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು. |

ಸಂಖ್ಯೆ: ಪಸಂಮೀ ಇ-63 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು